# ‘ತಾರಕ’ ಮಂತ್ರ..

ಯೋಗರಾಜ ಭಟ್ ನಿರ್ದೇಶನದ ‘ಮುಗುಳುನಗೆ’ ಹಾಗೂ ಧ್ರುವ ಸರ್ಜಾ ನಟನೆಯ ‘ಭರ್ಜರಿ’ ಚಿತ್ರಗಳ ಗೆಲುವಿನಿಂದಾಗಿ ಗಾಂಧಿನಗರವೀಗ ಗೆಲುವಿನ ಉತ್ಸಾಹದಲ್ಲಿದೆ. ಈ ಲಹರಿಯನ್ನು ‘ತಾರಕ್’ ಮುಂದುವರಿಸುವ ನಿರೀಕ್ಷೆಯಿದೆ.

■ ರಘು

ಪ್ರಕಾಶ್ ಎಂದಕೂಡಲೇ ನೆನಪಿಗೆ ಬರುವುದು ‘ಮಿಲನ’. ಪುನೀತ್ ಅಭಿನಯದ ಈ ಸಿನಿಮಾ ಕನ್ನಡ ಚಿತ್ರರಂಗದ ಹಳತಾಗದ ಪ್ರೇಮಕಥೆಗಳಲ್ಲೊಂದು. ಈ ಚಿತ್ರದ ವರ್ಚಸ್ಸು ಎಷ್ಟಿದೆಯೆಂದರೆ, ನಿರ್ದೇಶಕ ಪ್ರಕಾಶ್ ಹೆಸರಿನೊಂದಿಗೆ ಸಿನಿಮಾದ ಶೀರ್ಷಿಕೆಯೂ ತಳಕು ಹಾಕಿಕೊಂಡಿದೆ. ಪ್ರಕಾಶ್ ಪಾಲಿಗೆ ‘ಮಿಲನ’ ಹಿತವೂ ಹೌದು, ಪಾರಾಗಲೇಬೇಕಾದ ಭಾರವೂ ಹೌದು. ಆ ಚಿತ್ರದ ಪ್ರಭಾವಳಿಯಿಂದ ಹೊರಬರಲು ಅವರ ಮತ್ತೊಂದು ಸಿನಿಮಾ ಬಹುದೊಡ್ಡ ಯಶಸ್ಸನ್ನು ಗಳಿಸಲೇಬೇಕು. ಈ ನಿಟ್ಟಿನಲ್ಲಿ ‘ತಾರಕ್’ ನೆರವಿಗೆ ಬಂದೀತೆ?

‘ತಾರಕ್’ ಗಾಂಧಿನಗರ ತವಕದಲ್ಲಿ ನಿರೀಕ್ಷಿಸುತ್ತಿರುವ ಚಿತ್ರ. ದರ್ಶನ್ ಅಭಿನಯದ ಈ ಸಿನಿಮಾ ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಅ. 29ರಂದು ತೆರೆಗೆ).

ದರ್ಶನ್ ಸಿನಿಮಾಗಳೆಂದರೆ ಅಭಿಮಾನಿಗಳ ಪಾಲಿಗೆ ಹಬ್ಬ. ಆದರೆ, ‘ತಾರಕ್’ ಬಳಗ ಅಭಿಮಾನಿಗಳ ಜೊತೆಗೆ ಕೌಟುಂಬಿಕ ಚಿತ್ರಗಳ ಪ್ರೇಕ್ಷಕರನ್ನೂ ಗುರಿಯಾಗಿಸಿಕೊಂಡಿದೆ. ಕೌಟುಂಬಿಕ ಮನರಂಜನೆಯ ಚಿತ್ರಗಳನ್ನು ರೂಪಿಸುವುದರಲ್ಲಿ ಪ್ರಕಾಶ್ ಸಿದ್ಧಹಸ್ತರು. ಅವರ ಸಿನಿಮಾಗಳು ಭಾವೋತ್ಕರ್ಷಕ್ಕೆ ಹಾಗೂ ಸದಭಿರುಚಿಗೆ ಹೆಸರಾಗಿವೆ. ‘ಮಿಲನ’, ‘ಗೋಕುಲ’, ‘ವಂಶಿ’, ‘ಖುಷಿ’ – ಇವೆಲ್ಲ ಚಿತ್ರಗಳಲ್ಲೂ ಮನೆಮಂದಿಯನ್ನು ಸೆಳೆಯುವ ಸೂತ್ರಗಳಿವೆ. ಈ ಲೆಕ್ಕಾಚಾರ ‘ತಾರಕ್’ ನಿರ್ಮಾಣದಲ್ಲೂ ಕೆಲಸ ಮಾಡಿರುವಂತಿದೆ.

‘ತಾರಕ್’ ಚಿತ್ರದ ಕಥೆಗೆ ಹಲವು ಕವಲುಗಳಿರುವಂತಿದೆ. ಚಿತ್ರದ ನಾಯಕ ಕ್ರೀಡಾಪಟು. ದರ್ಶನ್ ಮೊದಲ ಬಾರಿಗೆ ಕ್ರೀಡಾಪಟುವಿನ ಪೋಷಾಕಿನಲ್ಲಿ ಕಂಗೊಳಿಸಿರುವುದು ಅಭಿಮಾನಿಗಳಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟಿಸಿದೆ. ಪೋಸ್ಟರ್‌ಗಳಲ್ಲಿನ ದೇವರಾಜ್–ದರ್ಶನ್‌ರ ಚಿತ್ರಗಳು ಸಿನಿಮಾದಲ್ಲಿ ಸಂಬಂಧಗಳ ಮೆಲೊಡ್ರಾಮ ಇರುವುದರ ಸೂಚನೆಯಂತಿವೆ. ದರ್ಶನ್‌ರ ವೇಷಭೂಷಣ ಹಾಗೂ ಕೇಶವಿನ್ಯಾಸ ಕೂಡ ನಾಯಕನ ಪಾತ್ರ ವಿಭಿನ್ನವಾಗಿರುವ ಸುಳಿವನ್ನು ನೀಡುವಂತಿವೆ. ಅದ್ದೂರಿತನದಲ್ಲೂ ‘ತಾರಕ್’ ಗಮನಸೆಳೆಯುವಂತಿದೆ. ಬೆಂಗಳೂರಿನ ಜೊತೆಗೆ ಮಲೇಷಿಯಾ, ಇಟಲಿ, ಸ್ವಿಟ್ಜರ್‌ಲೆಂಡ್‌ಗಳಲ್ಲಿ ಸಿನಿಮಾದ ಚಿತ್ರೀಕರಣ ನಡೆದಿದೆ.



ಪ್ರಕಾಶ್‌ಗೆ ಮಾತ್ರವಲ್ಲ, ದರ್ಶನ್ ಪಾಲಿಗೂ ‘ತಾರಕ್’ ಗೆಲ್ಲಲೇಬೇಕಾದ ಸಿನಿಮಾ. ದರ್ಶನ್‌ರ ಇತ್ತೀಚಿನ ಚಿತ್ರಗಳು ದೊಡ್ಡ ಗೆಲುವನ್ನೇನೂ ಕಂಡಿಲ್ಲ. ಭಾರೀ ಪ್ರಚಾರದೊಂದಿಗೆ ತೆರೆಕಂಡಿದ್ದ ‘ಚಕ್ರವರ್ತಿ’ ಸಿನಿಮಾ ನಿರೀಕ್ಷಿತ ಗೆಲುವು ಸಾಧಿಸಿರಲಿಲ್ಲ. ಭೂಗತಲೋಕದ ಕಥೆಗಳು ಕೂಡಾ ಅವರ ಕೈಹಿಡಿಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹೊಸ ರೀತಿಯ ಕಥೆಗಳಿಗೆ ತಮ್ಮನ್ನು ಒಡ್ಡಿಕೊಳ್ಳುವುದು ದರ್ಶನ್ ಪಾಲಿಗೆ ಅನಿವಾರ್ಯವಾಗಿದೆ.

ಶ್ರುತಿ ಹರಿಹರನ್ ಹಾಗೂ ಶಾನ್ವಿ ಶ್ರೀವಾತ್ಸವ್ ಚಿತ್ರದ ನಾಯಕಿಯರು. ಭಾವನೆಗಳ ಅಭಿವ್ಯಕ್ತಿಗೊಬ್ಬರು, ಗ್ಲಾಮರ್‌ಗೆ ಇನ್ನೊಬ್ಬರು ಎನ್ನುವ ಲೆಕ್ಕಾಚಾರ ನಿರ್ದೇಶಕರದು. ಕನ್ನಡದ ಬೇಡಿಕೆಯ ನಟನ ಜೊತೆಗೆ ಅಭಿನಯಿಸಿರುವ ಖುಷಿ ಶ್ರುತಿ ಅವರದು.

ದರ್ಶನ್ ವೃತ್ತಿಜೀವನದಲ್ಲಿ ‘ತಾರಕ್’ 49ನೇ ಸಿನಿಮಾ. ಪ್ರಸ್ತುತ ಚಿತ್ರೀಕರಣ ನಡೆಯುತ್ತಿರುವ ‘ಕುರುಕ್ಷೇತ್ರ’ ಐವತ್ತನೇ ಸಿನಿಮಾ. ಐವತ್ತನೇ ಸಿನಿಮಾದ ಸಂಭ್ರಮಕ್ಕೆ ‘ತಾರಕ್’ ಗೆಲುವು ಮುನ್ನುಡಿ ರೂಪದಲ್ಲಿ ಪರಿಣಮಿಸುತ್ತದೆಂದು ಚಿತ್ರತಂಡ ಭಾವಿಸಿದೆ. ನಿರ್ದೇಶಕರ ವೃತ್ತಿಪರತೆ ಹಾಗೂ ಪ್ರತಿಭೆಯ ಬಗ್ಗೆ ದರ್ಶನ್‌ಗೆ ವಿಶ್ವಾಸವಿದೆ. ನಿಗದಿತ ಸಮಯದಲ್ಲಿ ಕೊಂಚವೂ ಏರುಪೇರಾಗದಂತೆ ಶೂಟಿಂಗ್ ಮುಗಿಸಿದ ಪ್ರಕಾಶ್ ಬಗ್ಗೆ ದರ್ಶನ್ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

